# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **152** |
| ಉತ್ತರಿಸಬೇಕಾದ ದಿನಾಂಕ | : | 05.07.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ವಸತಿ ಯೋಜನೆಗಳ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; | ಕಳೆದ ಮೂರು ವರ್ಷಗಳಲ್ಲಿ ಅಂದರೆ 2020-21 ರಿಂದ 2022-23ರವರೆಗೆ ರಾಜ್ಯದ ವಿವಿಧ ವಸತಿ ಯೋಜನೆಗಳಲ್ಲಿ 2,92,476 ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿದೆ. |
| ಆ) | ಹಂಚಿಕೆ ಮಾಡಲುದ್ದೇಶಿಸಿದ್ದ ವಸತಿ ನಿವೇಶನಗಳ ಸಂಖ್ಯೆ ಎಷ್ಟು ; ಸಾಧಿಸಲಾದ ಪ್ರಗತಿ ಎಷ್ಟು ; | ಮಾನ್ಯ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಮತ್ತು ನಗರ ನಿವೇಶನ ಯೋಜನೆಗಳಲ್ಲಿ ನಿವೇಶನರಹಿತರ ಸಂಖ್ಯೆ ಮತ್ತು ಜಮೀನಿನ ಲಭ್ಯತೆಗೆ ಅನುಗುಣವಾಗಿ ನಿವೇಶನ ಹಂಚಿಕೆ ಮಾಡುತ್ತಿರುವುದರಿಂದ ಯಾವುದೇ ಭೌತಿಕ ಗುರಿ ನಿಗದಿಪಡಿಸಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಗ್ರಾಮೀಣ ಹಾಗೂ ನಗರ ನಿವೇಶನ ಯೋಜನೆಗಳಡಿ ಒಟ್ಟು 26582 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ವರ್ಷವಾರು ವಿವರ ಈ ಕೆಳಕಂಡಂತಿದೆ.<br><br>(ವರ್ಷ / ಗ್ರಾಮೀಣ / ನಗರ / ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ)<br>2020-21 / 2217 / 502 / 2719<br>2021-22 / 1829 / 866 / 2695<br>2022-23 / 10110 / 11058 / 21168<br>**ಒಟ್ಟು** / **14156** / **12426** / **26582** |
| ಇ) | ಪ್ರಸ್ತುತ ಸರ್ಕಾರ ಹೊಸದಾಗಿ ವಸತಿ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆಯೇ | ನಿವೇಶನ ಸಹಿತ ವಸತಿ ಸೌಕರ್ಯ ಒದಗಿಸಲು ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ ಮತ್ತು ನಗರ ಪ್ರದೇಶದಲ್ಲಿ ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ. |
| ಈ) | ಈ ಕುರಿತು ರೂಪಿಸಿರುವ ಕಾರ್ಯಕ್ರಮಗಳೇನು ? | ಅರ್ಹ ನಿವೇಶನರಹಿತ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಖಾಸಗಿ ಜಮೀನು ಖರೀದಿಗೆ ಕ್ರಮವಹಿಸಲಾಗುತ್ತಿದೆ.<br>ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2016 (ಭಾ-2), |

| ವರ್ಷ | ಗ್ರಾಮೀಣ | ನಗರ | ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ |
|---|---|---|---|
| 2020-21 | 2217 | 502 | 2719 |
| 2021-22 | 1829 | 866 | 2695 |
| 2022-23 | 10110 | 11058 | 21168 |
| **ಒಟ್ಟು** | **14156** | **12426** | **26582** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ದಿನಾಂಕ: 12.07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ. |

| ಕ್ರ.ಸಂ. | ಪ್ರದೇಶ | ಮಾರ್ಗಸೂಚಿ ಬೆಲೆ (ಪ್ರತಿ ಎಕರೆಗೆ) | ಗರಿಷ್ಠ ಮಿತಿ (ಪ್ರತಿ ಎಕರೆಗೆ ರೂ.ಲಕ್ಷಗಳಲ್ಲಿ) |
|---|---|---|---|
| 1 | ಗ್ರಾಮೀಣ ಪ್ರದೇಶ | ಮಾರ್ಗಸೂಚಿ ಬೆಲೆಗಿಂತ 4 ಪಟ್ಟು | Rs.9.00 |
| 2 | ಪಟ್ಟಣ ಪಂಚಾಯಿತಿ | ಮಾರ್ಗಸೂಚಿ ಬೆಲೆಗಿಂತ 3 ಪಟ್ಟು | Rs.12.00 |
| 3 | ಪುರಸಭೆ | | Rs.15.00 |
| 4 | ನಗರಸಭೆ | | Rs.22.50 |
| 5 | ಮಹಾನಗರ ಪಾಲಿಕೆ | | Rs.37.50 |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | Rs.75.00 |

ಮೇಲ್ಕಂಡ ವಿಧಾನಗಳ ಮೂಲಕ ನಿವೇಶನರಹಿತರ ಸಂಖ್ಯೆಗನುಗುಣವಾಗಿ ಮಂಜೂರಾದ ಸರ್ಕಾರಿ/ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿಕೊಂಡು ಅರ್ಹ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಗರಿಷ್ಠ/ಕನಿಷ್ಠ ಗುರಿ ಅಥವಾ ಕಾಲಮಿತಿ ನಿಗಧಿಪಡಿಸಿರುವುದಿಲ್ಲ. ಜಮೀನಿನ ಲಭ್ಯತೆಗನುಗುಣವಾಗಿ ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆಗೆ ಹಂತ ಹಂತವಾಗಿ ನಿವೇಶನ/ವಸತಿ ಸೌಕರ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ವಇ 162 ಹೆಚ್ಎಎಂ 2023

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು